## ಕಳೆದ ಸಂಚಿಕೆಯಲ್ಲಿ



ರಿತಿಕ್ ದೆಹಲಿಗೆ ಹೋಗಿದ್ದಾಗ ಸೋದರ ಮಾವ ಬಟ್ಟೆಯಂಗಡಿಗೆ ಕರೆದುಕೊಂಡು ಹೋಗಿ ಬಟ್ಟೆ ಕೊಡಿಸುತ್ತಾರೆ. ಆಗ ರಿತಿಕ್ ಒಂದು ಟೀ ಶರ್ಟ್ ಅನ್ನು ಕದಿಯುತ್ತಾನೆ. ಇದನ್ನು ಅಂಗಡಿ ಮಾಲೀಕ ಹೇಳಿದಾಗ ಸೋದರ ಮಾವ ಅದರ ಹಣ ಕೊಡುತ್ತಾನೆ. ಈ ವಿಚಾರ ತಂದೆಗೆ ತಿಳಿಸಿದಾಗ, ಮಗ ಮಾಡಿರುವುದರಲ್ಲಿ ತಪ್ಪಿಲ್ಲ ಎನ್ನುತ್ತಾರೆ ರಿತಿಕ್ ತಂದೆ. ಈ ಕಥೆಯನ್ನು ರಿತಿಕ್, ಸುಗಂಧಾಗೆ ಹೇಳಿದಾಗ ಆಕೆಗೆ ರಿತಿಕ್‌ನ ಮನಸ್ಥಿತಿಯ ಸ್ಪಷ್ಟ ಅರಿವಾಗುತ್ತದೆ. ತಂದೆಯಾದವರು ಮಗ ಹಾಳಾಗುವಷ್ಟು ವಹಿಸಿಕೊಳ್ಳುವುದು ಸುಗಂಧಾಗೆ ಹಿಡಿಸಲಿಲ್ಲ. ಒಮ್ಮೆ ರಿತಿಕ್ ತಂದೆ ಬಂದು ಸುಗಂಧಾ ರಿತಿಕ್ ಜೊತೆಯಲ್ಲಿರಬೇಕಾದರೆ ಮದುವೆಯಾಗಿ ಇರಬೇಕು. ಇಲ್ಲವಾದರೆ ಬೇರೆಯವರು ಇಲ್ಲಸಲ್ಲದ ಮಾತಾಡುತ್ತಾರೆ ಎನ್ನುತ್ತಾರೆ. ಇಬ್ಬರು ಒಟ್ಟಿಗೆ ಜೀವಿಸುವುದಾದರೂ ಮದುವೆಯಾಗಿ ಅಲ್ಲ ಎಂಬ ವಿಚಾರವನ್ನು ಅಪ್ಪನಿಗೆ ರಿತಿಕ್ ತಿಳಿಸುತ್ತಾನೆ. ಇದಾಗಿ ಕಚೇರಿಗೆ ಹೋದಾಗ ಸುಗಂಧಾ ಮನಸ್ಥಿತಿ ಅರಿತು ಕೀರ್ತಿ ಸುಗಂಧಾ–ರಿತಿಕ್ ಬಗ್ಗೆ ವಿಚಾರಿಸಿಕೊಳ್ಳುತ್ತಾಳೆ. ರಿತಿಕ್‌ನ ತಾಯಿ ಫೋನ್ ಮಾಡಿ ಸುಗಂಧಾ ತಮ್ಮ ಮಗನ ಜೊತೆಗಿರುವ ಬಗ್ಗೆ ಆಕ್ಷೇಪ ವ್ಯಕ್ತಪಡಿಸುತ್ತಾರೆ.

'ಓಹೋ!'

ರಿತಿಕ್ ಮೌನವಹಿಸಿದ. ಅವನು ತಿಂಡಿ ತಿಂದು, ಚಹಾ ಮಾಡಲು ಎದ್ದು ನಿಂತ. ಅಲ್ಲಿಯೇ ನಮ್ಮಿಬ್ಬರ ನಡುವೆ, ಸಂಜೆಯ ಚಹಾ ರಿತಿಕ್ ಮಾಡುವುದಾಗಿ ತೀರ್ಮಾನವಾಗಿತ್ತು. ಅವನು ಚಹಾ ಚೆನ್ನಾಗಿ ಮಾಡುತ್ತಿದ್ದ, ಇದನ್ನು ನಾನು ರಿತಿಕ್‌ಗೆ ಹೇಳುತ್ತಿದ್ದೆ. ನಾನು ತಿಂಡಿ ತಿಂದು ಮುಗಿಸಿದಾಗ ರಿತಿಕ್ ಚಹಾ ಮಾಡಿ ತಂದ.

'ತಗೊಳ್ಳಿ ಮೇಡಂ, ನಿಮ್ಮ ಸೇವಕ ಚಹಾ ಮಾಡಿ ತಂದಿದ್ದಾನೆ', ರಿತಿಕ್ ವಾತಾವರಣವನ್ನು ಹಗುರಗೊಳಿಸಲು ಪ್ರಯತ್ನಪಡುತ್ತಾ ನಕ್ಕ. ಆದರೂ ನನಗೆ ಅವನ ನಗು ಕೃತಕವೆನಿಸಿತು.

'ಇವತ್ತು ಅಮ್ಮ ನನ್ನ ಆಫೀಸಿಗೆ ಫೋನ್ ಮಾಡಿದ್ದರು', ನಾನು ಚಹಾ ಕಪ್ ತೆಗೆದುಕೊಳ್ಳುತ್ತಾ ಹೇಳಿದೆ.

'ಅಮ್ಮ? ನಿನ್ನ ಅಮ್ಮನೋ, ನನ್ನ ಅಮ್ಮನೋ?' ರಿತಿಕ್‌ನ ಹಣೆಯಲ್ಲಿ ಸುಕ್ಕುಗಳು ಮೂಡಿದವು.

'ನಿನ್ನ ಅಮ್ಮ'

'ಅವರಿಗೆ ನಿನ್ನ ಮೊಬೈಲ್ ನಂಬರ್ ಎಲ್ಲಿಂದ ಸಿಕ್ತು? ಅದು ಅಪ್ಪನಿಗೂ ಸಹ ಗೊತ್ತಿಲ್ಲ' ಎಂದ ರಿತಿಕ್.

'ಅವರು ನನ್ನ ಮೊಬೈಲ್‌ಗೆ ಅಲ್ಲ, ನಮ್ಮ ಆಫೀಸಿಗೆ ಫೋನ್ ಮಾಡಿದ್ದರು'.

'ಓಹ್, ಅವರು ಏನ್ ಹೇಳಿದ್ರು?' ರಿತಿಕ್‌ನ ಮುಖ ಬಿಳುಪಾಯಿತು. ಅವನಿಗೆ ಅವನ ತಾಯಿಯ ಸ್ವಭಾವ ತಿಳಿದಿತ್ತು.

'ನನಗೆ ಎಲ್ಲಾ ಬಿರುದುಗಳನ್ನೂ ಕೊಟ್ಟು ಸನ್ಮಾನಿಸಿದರು. ನಾನು ಅವರ ಮಗನನ್ನು ಬುಟ್ಟಿಗೆ ಹಾಕಿಕೊಂಡೆನಂತೆ; ಅವರು ಇಲ್ಲಿಗೆ ಬಂದಾಗ ನನ್ನನ್ನು ಕಸಬರಿಗೆಯಿಂದ ಹೊಡೆದು, ನನ್ನನ್ನು ತಮ್ಮ ಮಗನ ಮನೆಯಿಂದ ಹೊರ ಹಾಕ್ತಾರಂತೆ', ನಾನು ತುಂಬಾ ತಾಳ್ಮೆ ಮತ್ತು ಶಾಂತ ಧ್ವನಿಯಲ್ಲಿ ಹೇಳಿದೆ. ರಿತಿಕ್‌ನ ತಾಯಿ ಹೇಳಿದ ಅಪಶಬ್ದಗಳನ್ನೆಲ್ಲಾ ರಿತಿಕ್‌ಗೆ ಹೇಳುವುದು ಉಚಿತವೆಂದು ಅನ್ನಿಸಿರಲಿಲ್ಲ. ಅವರ ಅಪಶಬ್ದಗಳು ನನಗಿನ್ನೂ ಕೇಳಿಸುತ್ತಿದ್ದವು.

'ಅಮ್ಮ ಹೀಗೆ ಹೇಳಿದರೇ?' ರಿತಿಕ್ ಅಸಹಜತೆಯಿಂದ ಕೇಳಿದ.

'ಹೌದು'

'ಅವರು ಹೀಗೆಲ್ಲಾ ಮಾತನಾಡಬಾರದು. ಇಲ್ಲ, ಅವರು ಮಾಡಿದ್ದು ಸರಿಯಲ್ಲ,' ರಿತಿಕ್ ಸಹ ರೇಗಿದ.

'ಹೋಗ್ಲಿ ಬಿಡು'

'ನೀನು ಅವರಿಗೆ ಉತ್ತರಿಸಲಿಲ್ವ?'

'ಇಲ್ಲ! ನಾನು ಬಯಸಿದ್ದಾಗ್ಯೂ, ಉತ್ತರ ಕೊಡಲು ನನ್ನಿಂದ ಸಾಧ್ಯವಿರಲಿಲ್ಲ. ಅಕೌಂಟೆಂಟ್ ಸಾಹೇಬ್ರು ಅಲ್ಲಿಯೇ ಕೂತಿದ್ದರು. ನನ್ನಿಂದ ಕೇಳಲು ಸಾಧ್ಯವಾಗದಿದ್ದಾಗ, ನಾನು ರಿಸೀವರ್ ಕೆಳಗಿಟ್ಟಿದ್ದೆ. ಆದರೆ ಅವರು ಮತ್ತೆ ಫೋನ್ ಮಾಡಿ ಅಕೌಂಟೆಂಟ್ ಸಾಹೇಬ್ರಿಗೆ ನನ್ನ ಬಗ್ಗೆ ಕೆಟ್ಟದ್ದಾಗಿ ಹೇಳಿದರು. ಇದನ್ನು ಅವರು ಖಂಡಿತ ಮಾಡಬಾರದಿತ್ತು. ಹೇಳುವುದನ್ನು ನನಗೇ ಹೇಳಬೇಕಿತ್ತು.'

'ನಾನು ಅಮ್ಮನ ಹತ್ರ ಮಾತಾಡ್ತೇನೆ, ಅವರು ಹೀಗೆ ಮಾಡಿದ್ದು ಸರಿಯಲ್ಲ.'

'ಹೋಗ್ಲಿ ಬಿಡು, ಅವರು ಎಷ್ಟಾದರೂ ನಮಗಿಂತ ದೊಡ್ಡವರು: ಅವರನ್ನು ನಾವು ಒಂದು ಬಾರಿ ಕ್ಷಮಿಸೋಣ'. ನಾನು ರಿತಿಕ್‌ನನ್ನು ಶಾಂತಗೊಳಿಸುತ್ತಾ ಹೇಳಿದೆ. ನಾನು ರಿತಿಕ್ ಮತ್ತು ಅವನ ತಾಯಿಯ ನಡುವೆ ವಿವಾದವನ್ನು ಹೆಚ್ಚಿಸಲು ಬಯಸುತ್ತಿರಲಿಲ್ಲ. ರಿತಿಕ್‌ನ ತಾಯಿ ನನ್ನನ್ನು ನಿಂದಿಸಿದ್ದರೆ, ಇದರಲ್ಲಿ ರಿತಿಕ್‌ನ ದೋಷವಿರಲಿಲ್ಲ.

'ಇಲ್ಲ, ನಾನು ಅವರ ಹತ್ರ ಮಾತಾಡೇ ಆಡ್ತೀನಿ'.

'ಹೋಗ್ಲಿ ಬಿಡು ರಿತಿಕ್, ಹಟ ಮಾಡ್ಬೇಡ. ಒಂದು ವೇಳೆ ಅವರು ಮತ್ತೆ ಫೋನ್ ಮಾಡಿದರೆ, ನಾನು ಅವರಿಗೆ ತಿಳಿ ಹೇಳ್ತೀನಿ' ಎಂದೆ.

'ನೀನು ಅವರೊಂದಿಗೆ ಜಗಳವಾಡ್ತೀಯ?' ರಿತಿಕ್ ತನ್ನ ತಾಯಿ ಬಗ್ಗೆ ಚಿಂತಿತನಾದನೋ ಅಥವಾ ನನ್ನ ಬಗ್ಗೆ ಚಿಂತಿತನಾದನೋ, ನನಗೆ ಅರ್ಥವಾಗಲಿಲ್ಲ.

'ಇಲ್ಲ, ನಾನೇಕೆ ಅವರೊಂದಿಗೆ ಜಗಳವಾಡಲಿ? ನಾವು ಈ ರೀತಿ ಜೊತೆಯಲ್ಲಿರುವುದರಿಂದ ಯಾರಿಗೂ ಹಾನಿಯಾಗಲ್ಲ ಅಂತ ನಾನು ಅವರಿಗೆ ಭರವಸೆ ಕೊಡ್ತೀನಿ'.

'ಈ ದೊಡ್ಡವರು ನಮಗೇಕೆ ನೆಮ್ಮದಿಯಿಂದಿರಲು ಬಿಡಲ್ಲ?' ರಿತಿಕ್ ರೇಗಿದ.

ಸಮಾಜ ಮತ್ತು ಸಂಬಂಧಿಕರು ಮೌನವಾಗಿದ್ದರೆ ಸಾಕಷ್ಟು ಸಮಸ್ಯೆಗಳು ಹುಟ್ಟುವುದೇ ಇಲ್ಲವೇನೋ! ನಾನು ರಿತಿಕ್‌ನೊಂದಿಗಿರುವ ವಿಷಯ ನನ್ನ ಅಮ್ಮನಿಗೂ ತಿಳಿಯಿತು. ಅವರು ಸಹ ನನಗೆ ಹೇಳದೆ, ಅದೊಂದು ದಿನ ನನ್ನೆದುರು ಬಂದು ನಿಂತರು.

'ಸುಗಂಧಾ, ಇದೇನು ಹೇಳ್ತಿದ್ದೀಯ? ಇಂಥ ಜೀವನವನ್ನು ಯಾರಾದ್ರು ಮಾಡ್ತಾರಾ?' ಅಮ್ಮ ತರಾಟೆಗೆ ತೆಗೆದುಕೊಂಡರು. ಅಮ್ಮನ ಈ ಹೇಳಿಕೆ ನನಗೇಕೋ ಕೆಡುಕೆನಿಸಿತು. ಅವರು ತಮ್ಮ ಜೀವನವನ್ನು ತಾವೇ ತಯಾರಿಸಿದ ತಮ್ಮ ಅಚ್ಚಿಗೆ ಹಾಕಿಲ್ಲವೇ? ಹೀಗಿರುವಾಗ ಅಮ್ಮ ನನಗೇಕೆ ಉಪದೇಶವನ್ನು ಕೊಡುತ್ತಿದ್ದಾರೆ? ಹಾಗಂತ ನಾನು ಅಮ್ಮನಿಗೆ ಎಲ್ಲವನ್ನೂ ಹೇಳುವ ಅವಕಾಶಕ್ಕಾಗಿ ಕಾಯುತ್ತಿದ್ದೆ. ನಾನು ಅವರಿಗೆ ರಿತಿಕ್ ಬಗ್ಗೆ ಹೇಗೆ ಹೇಳಲಿ ಅಥವಾ ಅವರನ್ನು ರಿತಿಕ್‌ನೊಂದಿಗೆ ಹೇಗೆ ಭೇಟಿ ಮಾಡಿಸಲಿ ಎಂಬ ದೊಡ್ಡ ಸಮಸ್ಯೆಯಲ್ಲಿದ್ದೆ. ನಾನು ರಿತಿಕ್‌ನೊಂದಿಗಿರಲು ಆರಂಭಿಸಿದ್ದೇನೆ, ನಾವಿಬ್ಬರು 'ಸಹಜೀವನ' ನಡೆಸುತ್ತಿದ್ದೇವೆ ಎಂದು ಹೇಳುವುದು ಅದಕ್ಕಿಂತ ದೊಡ್ಡ ಸಮಸ್ಯೆಯಾಗಿತ್ತು. ನಾನು ಅಮ್ಮನಲ್ಲಿ ಯಾವುದನ್ನೂ ಮುಚ್ಚಿಡಲು ಬಯಸುತ್ತಿರಲಿಲ್ಲ. ಮುಚ್ಚಿಡುವುದಾದರೂ ಹೇಗೆ ಸಾಧ್ಯ? ಅವರ ನಿವೃತ್ತಿಯ ನಂತರ ಅವರು ನನ್ನೊಂದಿಗಿರಲೇ ಬೇಕಿತ್ತು, ಆದರೆ ಅವರ ನಿವೃತ್ತಿಗೆ ಇನ್ನೂ ಅನೇಕ ವರ್ಷಗಳಿದ್ದವು.

'ಅಮ್ಮಾ, ನನ್ನ ಜೀವನಕ್ಕೆ ಏನೂ ಆಗಿಲ್ಲ, ನಾನು ಚೆನ್ನಾಗಿದ್ದೇನೆ, ಮಜವಾಗಿಯೇ ಇದ್ದೇನೆ', ಎಂದು ಅಮ್ಮನಿಗೆ ಹೇಳಿದೆ.

'ನೀನು ಯಾವುದೋ ಹುಡುಗನೊಂದಿಗಿರಲು ಆರಂಭಿಸಿದ್ದೀಯ ಅಂತ ಯಾರೋ ಹೇಳುತ್ತಿದ್ದರು. ಇದು ನಿಜವೇ?' ಅಮ್ಮ ಕೇಳಿದರು.

'ಹೌದು, ಆದರೆ ಸಂಪೂರ್ಣ ನಿಜವಲ್ಲ. ನಾನು ಅವನೊಂದಿಗಿಲ್ಲ, ಅವನೇ ನನ್ನೊಂದಿಗಿದ್ದಾನೆ, ಅಥವಾ ನಾವಿಬ್ಬರು ಒಟ್ಟಿಗೆ ಇದ್ದೇವೆ ಅಂತಲೂ ಹೇಳಬಹುದು'.

'ಅವನೇನು ಮಾಡ್ತಿದ್ದಾನೆ?'

'ಮಲ್ಟಿನ್ಯಾಷನಲ್ ಕಂಪನಿಯಲ್ಲಿ ಏರಿಯಾ ಮ್ಯಾನೇಜರ್ ಆಗಿದ್ದಾನೆ, ಒಳ್ಳೆಯ ಸಂಪಾದನೆಯಿದೆ'.

(ಸಶೇಷ)

